# ಕರ್ನಾಟಕ ಲೋಕಾಯುಕ್ತ

ಸಂ.ಕಂಪ್ಲೇಂಟ್/ಉಪಲೋಕ್/ಎಂ.ವೈ.ಎಸ್-7091/2014/ಡಿಆರ್‌ಇ-5

ಬಹುಮಹಡಿಗಳ ಕಟ್ಟಡ,
ಡಾ: ಅಂಬೇಡ್ಕರ್ ವೀಧಿ,
ಬೆಂಗಳೂರು-560 001,
ದಿನಾಂಕ:2.3.2017.

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(1)ರ ಅನ್ವಯ ವರದಿ

ವಿಷಯ: ಶ್ರೀ.ಬಿ.ಎಸ್.ಶೇಖರ್, ಬಿನ್ ಸಿದ್ದಪ್ಪಗೌಡ.ಜೆ., ಬೆಲೂರು, ಪಾಳ್ಯ ಅಂಚೆ, ಆಲೂರು ತಾಲ್ಲೂಕು, ಹಾಸನ ಜಿಲ್ಲೆ ಅವರು ಸಲ್ಲಿಸಿದ ದೂರಿನ ಕುರಿತು.

****

ಶ್ರೀ.ಬಿ.ಎಸ್.ಶೇಖರ್, ಬಿನ್ ಸಿದ್ದಪ್ಪಗೌಡ.ಜೆ., ಬೆಲೂರು, ಪಾಳ್ಯ ಅಂಚೆ, ಆಲೂರು ತಾಲ್ಲೂಕು, ಹಾಸನ ಜಿಲ್ಲೆ (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ), ಇವರು ಶ್ರೀಮತಿ.ಲಕ್ಷ್ಮೀ, ಬಿಲ್ ಕಲೆಕ್ಟರ್, ಮಡಬಲು ಗ್ರಾಮ ಪಂಚಾಯ್ತಿ, ಆಲೂರು ತಾಲ್ಲೂಕು, ಹಾಸನ ಜಿಲ್ಲೆ ಮತ್ತು (2) ಶ್ರೀ.ಚಂದ್ರಶೇಖರ್.ಹೆಚ್.ಎಸ್., ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ ಆಲೂರು ತಾಲ್ಲೂಕು, ಹಾಸನ ಜಿಲ್ಲೆ (ಇನ್ನು ಮುಂದೆ 'ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ಸಲ್ಲಿಸಿದ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ.9ರಡಿಯಲ್ಲಿ ತನಿಖೆಗಾಗಿ ಕೈಗೆತ್ತಿಕೊಳ್ಳಲಾಯಿತು.

2. ದೂರುದಾರರು ತಮ್ಮ ದೂರಿನಲ್ಲಿ 1ನೇ ಎದುರುದಾರರಾದ ಲಕ್ಷ್ಮೀ ಇವರು ಮನೆಯ ಕಂದಾಯ ನೀರಿನ ಕಂದಾಯನ್ನು ಮಡಬಲು ಗ್ರಾಮಸ್ಥರಿಂದ ವಸೂಲಿ ಮಾಡುವಾಗ ಸುಳ್ಳು ರಶೀದಿಗಳನ್ನು ಕೊಡುತ್ತಿದ್ದರು ರಶೀದಿಯ ಕಾಪಿಯಲ್ಲಿ ತೋರಿಸಿರುವ ಹಣವೇ ಬೇರೆ ಅಸಲು ರಶೀದಿಯಲ್ಲಿ ಬೇರೆ ಹಣ ತೋರಿಸಿ ಪಂಚಾಯ್ತಿಗೆ ನಷ್ಟವನ್ನು ಉಂಟು ಮಾಡಿದ್ದರು ಈ ಬಗ್ಗೆ ಸಿ.ಇ.ಓ., ರವರು ತನಿಖೆಗೆ ಆಧೇಶಿಸಿ ಎದುರುದಾರರು ಸರ್ಕಾರಿ ನೌಕರರಲ್ಲ ಗೌರವ ಧನದ ಮೇಲೆ ಕೆಲಸ ಮಾಡುತ್ತಿರುವುದರಿಂದ ಸಿ.ಇ.ಓ., ರವರಿಗೆ ಸೂಕ್ತ ಕ್ರಮ ಕೈಗೊಳ್ಳಲು ಹೇಳಿದಾಗ ಗ್ರಾಮ ಪಂಚಾಯ್ತಿ ದಿ: 3.9.2012ರಂದು ಸಮಾನ್ಯ ಸಭೆ ಕರೆದು ಎದುರುದಾರರನ್ನು

ಕೆಲಸದಿಂದ ವಜಾ ಮಾಡಿದ್ದಾರೆ. ಅವರಿಂದ 4300/-ರೂಗಳನ್ನು ಕಟ್ಟಿಸಿಕೊಳ್ಳಬೇಕಾಗಿತ್ತು. ಅದನ್ನು ಕಟ್ಟಿಸಿಕೊಳ್ಳಲಾಗಿದೆ ಅಂತ ವರದಿ ಸಲ್ಲಿಸಿದರು ಸದರಿ ಲಕ್ಷ್ಮೀ ಇವರು ತಾಲ್ಲೂಕು ಪಂಚಾಯ್ತಿಯ ಕಾರ್ಯನಿರ್ವಹಕ ಅದಿಕಾರಿಗಳಿಗೆ ಬೇಕಾದವರು ಆಗಿದ್ದರಿಂದ ಅವರನ್ನು ಪುನಃ ಕೆಲಸದ ಮೇಲೆ ತೆಗೆದುಕೊಳ್ಳಲಾಗಿದೆ. ಇ.ಓ., ರವರು ಅಫೀಲಿನಲ್ಲಿ ಲಕ್ಷ್ಮೀ ರವರ ವಿರುದ್ಧ ಮಾಡಿದ್ದ ಪಂಚಾಯ್ತಿಯ ಠರಾವನ್ನು ಅಮಾನ್ಯಗೊಳಿಸಿ ಪುನಃ ಕೆಲಸಕ್ಕೆ ತೆಗೆದುಕೊಳ್ಳಲು ಆಧೇಶಿಸಿದರು ಆದರೆ ನಂತರ ಇ.ಓ., ರವರು ವರದಿ ಕೇಳಿದಾಗ 1ನೇ ಎದುರುದಾರರು ಸಾಕಷ್ಟು ಹಣದ ಅವ್ಯವಹಾರ ಮಾಡಿದ್ದಾರೆಂದು ವರದಿಯನ್ನು ಕೊಟ್ಟರು ಅಂತ ತಿಳಿಸಿದ್ದರಿಂದ ಇ.ಓ., ಶ್ರೀ.ಎಸ್.ಹೆಚ್.ಚಂದ್ರಶೇಖರ್ ಹಾಲೂರು ತಾಲ್ಲೂಕು ಪಂಚಾಯ್ತಿ ರವರನ್ನು 2ನೇ ಎದುರುದಾರರನ್ನಾಗಿ ಸೇರಿಸಿಕೊಳ್ಳಲಾಯಿತು.

3) ಸಿ.ಇ.ಓ., ಜಿಲ್ಲಾ ಪಂಚಾಯ್ತಿ ಹಾಸನ ಇವರ ಪರವಾಗಿ ವರದಿ ಸಲ್ಲಿಸಿದ್ದು ಬಿಲ್ ಕಲೇಕ್ಟರ್ ಶ್ರೀಮತಿ.ಲಕ್ಷ್ಮಿ ಇವರು ಈ ಹಿಂದೆ ಮಡಬಲು ಗ್ರಾಮ ಪಂಚಾಯ್ತಿಯಲ್ಲಿ ಕಾರ್ಯನಿರ್ವಾಹಿಸುತ್ತಿದ್ದಾಗ ಕಂದಾಯ ವಸೂಲಾತಿಯ ಹಣ 4300/- ರೂಗಳನ್ನು ದುರುಪಯೋಗ ಮಾಡಿಕೊಂಡಿದ್ದು ನಂತರ ದಿ: 18.9.2014ರಂದು ಪಂಚಾಯ್ತಿ ಖಾತೆಗೆ ಜಮಾ ಮಾಡಿರುತ್ತಾರೆ ಅಂತ ಮಾಹಿತಿ ಕೊಟ್ಟಿದ್ದಾರೆ.

4) ತಾಲ್ಲೂಕು ಪಂಚಾಯ್ತಿಯ ಇ.ಓ., ಆದ ಚಂದ್ರಶೇಖರ್ ರವರು ಸಿ.ಇ.ಓ., ರವರು ತಮ್ಮ ವರದಿ ಕೇಳಿದಾಗ ಬಿಲ್ ಕಲೇಕ್ಟರ್ ಶ್ರೀಮತಿ.ಲಕ್ಷ್ಮಿ ಇವರು ಕರ್ತವ್ಯಲೋಪ ಭಷ್ಟಾಚಾರ ಹಣ ದುರುಪಯೋಗ ಮಾಡಿಕೊಂಡಿದ್ದಾರೆಂದು ವರದಿ ಮಾಡಿದ್ದಾರೆ. ಆದರೆ ಇದಕ್ಕಿಂತ ಮೊದಲು 26.8.2014ರಲ್ಲಿ ಪಂಚಾಯ್ತಿಯವರು ನ್ಯಾಯಯುತವಾದ ಅವಕಾಶ ನೀಡದೆ ಆದೇಶ ಮಾಡಿದ್ದರಿಂದ ಸದರಿ ಲಕ್ಷ್ಮೀ ಇವರು ಮಾಡಿದ್ದ ಅಫೀಲಿನಲ್ಲಿ ಆದೇಶ ಮಾಡಲಾಗಿದೆ. 2 ವ್ಯತಿರೀಕ್ತ ಆದೇಶಗಳನ್ನು ಮಾಡಿಲ್ಲ ಪಂಚಾಯ್ತಿ ರಾಜ್ ಅಧಿನಿಯಮ ನಿಯಮ 113ಅಡಿಯಲ್ಲಿ ಇರುವ ಅಧಿಕಾರವನ್ನು ಚಲಾಯಿಸಿ ಆದೇಶ ಮಾಡಲಾಗಿದೆ ಎಂದು ತಕರಾರುಗಳನ್ನು ಸಲ್ಲಿಸಿದ್ದಾರೆ.

5) 2ನೇ ಎದುರುದಾರರು ಸಲ್ಲಿಸಿರುವ ಉತ್ತರಗಳು ಸಮರ್ಥನೀಯವಾಗಿಲ್ಲ 4300/- ರೂಗಳಷ್ಟು ಹಣವನ್ನು 1ನೇ ಎದುರುದಾರರು ದುರುಪಯೋಗ ಪಡಿಸಿಕೊಂಡಿದ್ದಾರೆಂದು ಗೊತ್ತಾದ ಮೇಲೆ ಅವರು ಪುನಃ ಹಣ ಕಟ್ಟಿದರೆ ಅಲ್ಲಿಗೆ ಪ್ರಕರಣ ಮುಕ್ತಾಯವಾಗುವುದಿಲ್ಲ.

ತಾತ್ಕಾಲಿಕವಾಗಿ ಮಾಡಿಕೊಂಡಿರುವ ಹಣ ದುರುಪಯೋಗವು ಸಹ ಶಿಕ್ಷಾರ್ಹ ಅಪರಾಧವಾಗಿದೆ ಈ ಬಗ್ಗೆ 2ನೇ ಎದುರುದಾರರು ಯಾವುದೇ ಕ್ರಮ ತೆಗೆದುಕೊಂಡಿಲ್ಲ. 1ನೇ ಎದುರುದಾರರು ಸಲ್ಲಿಸಿರುವ ಅಪೀಲಿನಲ್ಲಿ 2ನೇ ಎದುರುದಾರರು ಅಥವಾ ಪಂಚಾಯ್ತಿ ಪಿ.ಡಿ.ಓ., ರವರು ಶ್ರೀಮತಿ. ಲಕ್ಷ್ಮೀ ಎನ್ನುವವರನ್ನು ಪುನಃ ಕೆಲಸಕ್ಕೆ ತೆಗೆದುಕೊಳ್ಳುವಾಗ ಸಿ.ಇ.ಓ., ರವರಿಂದ ಪುರ್ವಾನುಮತಿ ಪಡೆದಿಲ್ಲ. ಸಿ.ಇ.ಓ., ರವರ ಅಂತಿಮ ಆದೇಶ ಪಡೆಯದೆ ವಜಾಗೊಂಡ ನೌಕರರನ್ನು ನೇಮಿಸಿಕೊಂಡರೇ ನಿಯಮಾನುಸಾರ ಕ್ರಮ ಜರುಗಿಸಲಾಗುವುದು ಅಂತ ಪಿ.ಡಿ.ಓ., ರವರಿಗೆ ಮತ್ತು ಇ.ಓ., ರವರಿಗೆ ಸಿ.ಇ.ಓ., ರವರು ತಿಳಿಸಿದ್ದಾರೆ. ಆದರೂ ಸಹ ಸಿ.ಇ.ಓ., ರವರ ಪೂರ್ವನುಮತಿ ಇಲ್ಲದೆ ಬಿಲ್ ಕಲೇಕ್ಟರ್‌ಅನ್ನು ಕೆಲಸಕ್ಕೆ ತೆಗೆದುಕೊಂಡಿರುವುದರಿಂದ 2ನೇ ಎದುರುದಾರರು ಕರ್ತವ್ಯಲೋಪವೆಸಗಿದ್ದಾರೆ ಎನ್ನಲು ಸಾಕಷ್ಟು ಆಧಾರಗಳು ಇವೆ.

6) 1ನೇ ಎದುರುದಾರರನ್ನು ಈಗಾಗಲೇ ಬಿಲ್ ಕಲೇಕ್ಟರ್ ಹುದ್ದೆಯಿಂದ ವಜಾ ಮಾಡಲಾಗಿದೆ ಅಂತ ವರದಿ ಇರುವುದರಿಂದ ಅವರ ವಿರುದ್ಧ ತಾತ್ಕಾಲಿಕ ಹಣ ದುರುಪಯೋಗಕ್ಕಾಗಿ ಸೂಕ್ತವಾದ ಕಾನೂನು ಕ್ರಮ ತೆಗೆದುಕೊಳ್ಳುವಂತೆ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1)ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

7) ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರ ಪ್ರಕಾರ, ಶಿಸ್ತು ಪ್ರಾಧಿಕಾರವು ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(1)ರ ವರದಿಯಲ್ಲಿನ ಶಿಫಾರಸ್ಸಿಗನುಗುಣವಾಗಿ ಕ್ರಮ ಕೈಗೊಂಡ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ ಈ ವರದಿ ತಲುಪಿದ ದಿನಾಂಕದಿಂದ ಒಂದು ತಿಂಗಳ ಅವಧಿಯೊಳಗೆ ಈ ಪ್ರಾಧಿಕಾರಕ್ಕೆ ತಿಳಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

Sd/- 2/3/17.

(ನ್ಯಾಯಮೂರ್ತಿ ಸುಭಾಷ್ ಬಿ. ಆಡಿ)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ, ಬೆಂಗಳೂರು.